ಅ) ಮೂಲ್ಕಿಯ ಸಬ್-ರಿಜಿಸ್ಟ್ರಾರ್ ಆಫೀಸನ್ನು ಸ್ವಂತ ಕಟ್ಟಡದಿಂದ ಬೇರೆಡೆಗೆ ಸ್ಥಳಾಂತರ ಮಾಡಲು ಕಾರಣವೇನು?

ಆ) ಈ ಕಟ್ಟಡದ ದುರಸ್ತಿಗೆ ಬೇಕಾಗುವ ಹಣವೆಷ್ಟು?

ಇ) ಹಾಗಿದ್ದಲ್ಲಿ ದುರಸ್ತಿಗೆ ಹಣ ಪೂರೈಕೆ ಮಾಡದಿರುಲು ಕಾರಣವೇನು?

ಈ) ಸ್ವಲ್ಪ ಖರ್ಚು ಮಾಡುವುದರಿಂದ ಈ ಸುಂದರ ಕಟ್ಟಡ ಉಳಿಸಬಹುದಾದರರೂ ಈ ಬಗ್ಗೆ ಇಲಾಖೆ ಯಾವ ಕ್ರಮ ಕೈಗೊಳ್ಳದಿರಲು ಕಾರಣವೇನುಯ

ಉ) ಈ ಕಟ್ಟಡದ ದುರಸ್ತಿಗೆ ಸರ್ಕಾರ ಏನು ನಿರ್ಧಾರ ಕೈಗೊಂಡಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಸಚಿವರು):

ಅ) ಈ ಕಟ್ಟಡವು ಲೋಕೋಪಯೋಗಿ ಇಲಾಖೆಗೆ ಸೇರಿದೆ. ಇದು 100 ವರ್ಷಗಳಿಗಿಂತಲೂ ಹಳೆಯದಾದ ಕಾರಣ ಮತ್ತು ಈ ಕಟ್ಟಡವು ಯಾವುದೇ ಕ್ಷಣದಲ್ಲಿ ಬಿದ್ದು ಹೋಗುವುದೆಂದು ಲೋಕೋಪಯೋಗಿ ಇಲಾಖೆ ವರದಿ ಮಾಡಿದ ಕಾರಣ ಕಛೇರಿಯನ್ನು ಸ್ಥಳಾಂತರಿಸಲಾಯಿತು.

ಆ) ಈ ಕಟ್ಟಡವು ಲೋಕೋಪಯೋಗಿ ಇಲಾಖೆಗೆ ಸೇರಿದ್ದು, ಆ ಇಲಾಖೆಯು ಎಸ್ಟಿಮೇಟ್ ತಯಾರಿಸಿದ ನಂತರ ಎಷ್ಟು ಹಣ ಬೇಕು ಎಂದು ತಿಳಿಯುತ್ತದೆ.

ಇ) "ಆ" ಪ್ರಶ್ನೆಗೆ ಉತ್ತರಿಸಿರುವುದರಿಂದ ಇದು ಉದ್ಭವವಾಗುವುದಿಲ್ಲ.

ಈ) ಇದು ಲೋಕೋಪಯೋಗಿ ಇಲಾಖೆಗೆ ಸೇರಿರುವುದರಿಂದ ಇದರ ಬಗ್ಗೆ ಆ ಇಲಾಖೆಗೆ ಪತ್ರ ಬರೆಯಲಾಗುವುದು.

ಉ) -ಡಿಟೋ-

ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಶು ಚಿಕಿತ್ಸಾಲಯಗಳ ಸ್ಥಾಪನೆ

257 - ಶ್ರೀ ಬಾಬುರಾವ್ ಚವಾಣ್ (ಶಹಾಬಾದ್): ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್ ಕರ್ನಾಟಕ ಜಿಲ್ಲೆಗಳಿಗೆ ಹೆಚ್ಚಿನ ಪಶುಚಿಕಿತ್ಸಾಲಯದ ಅವಶ್ಯಕತೆ ಇರುವುದು ಸರ್ಕಾರದ ಗಮನದಲ್ಲಿ ಇದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿಯಲ್ಲಿ ಪಶುಸಂಗೋಪನಾ ಇಲಾಖೆಯ ಮಹತ್ವವಾದ ಕಾರ್ಯಗಳಾವುವು(ವಿವರ ನೀಡುವುದು)?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನಾ ಸಚಿವರು):

ಅ) ಹೌದು.

ಆ) 1991-92ನೇ ಸಾಲಿನಲ್ಲಿ ಹೆಚ್ಚು ಹೊಸ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.

ಇ) ಇಲಾಖೆಯ ಎಲ್ಲಾ ಯೋಜನೆಗಳನ್ನು ಸಮಾನವಾಗಿ ಹೈದರಾಬಾದ್ ಕರ್ನಾಟಕ ಏರಿಯಾ ಸೇರಿದಂತೆ ರಾಜ್ಯದಲ್ಲಿ ಕಾರ್ಯಗತ ಮಾಡಲಾಗುತ್ತಿದೆ.